# ಕನ್ನಡ ಪೋಸ್ಟ್

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಸಂಪಾದಕ : ಮಂಜು ಬನವಾಸೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 12 | Pages. 2 | Date: 06-12-2025, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 12 - ಪುಟಗಳು : 2 06-12-2025 ಶನಿವಾರ | Ph: 8762954248 | ದರ : ₹1


# ಹಾಸನಕ್ಕಿಂದು ಕಾಂಗ್ರೆಸ್ ನಾಯಕರ ದಂಡು

## ಸೇವೆ ಸಮರ್ಪಣೆ ಸಮಾವೇಶದಲ್ಲಿ ಸಿಎಂ ಡಿಸಿಎಂ ಭಾಗಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಜ್ಯ ಸರ್ಕಾರದ ಸೇವೆ ಸಮರ್ಪಣಾ ಸಮಾವೇಶದ ಹೆಸರಿನಲ್ಲಿ ನಗರದಲ್ಲಿ ಕಾಂಗ್ರೆಸ್ ಹವಾ ಎಬ್ಬಿಸಲು ಭಾರಿ ಸಿದ್ದತೆ ನಡೆದಿದೆ. ಸರ್ಕಾರಿ ಕಾರ್ಯಕ್ರಮವಾಗಿರುವುದರಿಂದ ಜಿಲ್ಲಾಡಳಿತ ತನ್ನ ತಯಾರಿಯಲ್ಲಿದ್ದರೆ, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಜನರನ್ನು ಸೇರಿಸುವ ಮೂಲಕ ಸಮಾವೇಶ ಯಶಸ್ವಿಯಾಗಿಸಬೇಕು ಎಂದು ಶ್ರಮಿಸುತ್ತಿದ್ದಾರೆ.

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಇಬ್ಬರೂ ಸಮಾವೇಶದಲ್ಲಿ ಭಾಗಿಯಾಗುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಶುಕ್ರವಾರ ಇಡೀ ದಿನ ಕಾರ್ಯಕ್ರಮದ ಸಿದ್ಧತೆಯಲ್ಲಿ ತೊಡಗಿದ್ದರು. ಅವರ ಶ್ರಮಕ್ಕೆ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಸಾಥ್ ನೀಡಿದ್ದಾರೆ.



### ಸಚಿವರಿಂದ ವೇದಿಕೆ, ಸಭಾಂಗಣ ಪರಿಶೀಲನೆ



ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಶುಕ್ರವಾರ ಬೆಳಗ್ಗೆ ಹಾಗೂ ಸಂಜೆ ಎರಡು ಬಾರಿ ಕಾರ್ಯಕ್ರಮದ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ಸಿದ್ಧತೆಗಳನ್ನು ಪರಿಶೀಲಿಸಿದರು.

ಜರ್ಮನ್ ಟೆಂಟ್ ಅಳಡಿಸಲಾಗಿದ್ದು, ಮಳೆ ಬಂದರೂ ಸಭಾಂಗಣದಲ್ಲಿ ಕುಳಿತವರಿಗೆ ಸಮಸ್ಯೆ ಆಗುವುದಿಲ್ಲ. ಅಲ್ಲಲ್ಲಿ ಎಲ್.ಇ.ಡಿ. ಪರದೆಗಳನ್ನೂ ಅಳವಡಿಸಲಾಗುವುದು. ಇದರಿಂದ ಎಲ್ಲರಿಗೂ ವೇದಿಕೆಯ ಸಮರ್ಪಕ ವೀಕ್ಷಣೆ ಲಭ್ಯವಾಗಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಸಿಇಓ ಪೂರ್ಣಿಮಾ, ಎಸ್ಪಿ ಮೊಹಮ್ಮದ್ ಸುಜೀತಾ ಮುಂತಾದವರಿದ್ದರು.

### 70 ಸಾವಿರ ಜನರ ನಿರೀಕ್ಷೆ

ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ಶಾಸಕರು ಭಾಗಿಯಾಗಲಿದ್ದಾರೆ. ಸರ್ಕಾರದ ಸೇವೆಗಳ ಸಮರ್ಪಣಾ ಸಮಾವೇಶ ಎಂದು ಹೆಸರಿಡಲಾಗಿದೆ. ಈ ಸಮಾವೇಶದಲ್ಲಿ ಸರ್ಕಾರಿ ಸವಲತ್ತುಗಳನ್ನು ಪಡೆಯುತ್ತಿರುವ ಫಲಾನುಭವಿಗಳಿಗೆ ಸರ್ಕಾರದ ಸೇವೆಯನ್ನು ಮುಟ್ಟಿಸುವ ಪ್ರಯತ್ನ ಮಾಡಲಾಗುವುದು.

ಸಮಾವೇಶದಲ್ಲಿ 70 ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ಭಾಗವಹಿಸಲಿದ್ದಾರೆ. ಅದರಲ್ಲಿ ಕಂದಾಯ ಇಲಾಖೆಗೆ ಹೆಚ್ಚು ಒತ್ತನ್ನು ಕೊಟ್ಟಿದ್ದೇವೆ. ಸಮಾವೇಶದಲ್ಲಿ ಪಹಣಿ, ಆಕಾರ್‌ಬಂದ್, ಮ್ಯೂಟೇಷನ್ ಪ್ರತಿ ಸೇರಿ ವಿವಿಧ ದಾಖಲೆಗಳನ್ನು ನೀಡಲಾಗುವುದು. ವಿವಿಧ ಇಲಾಖೆಗಳ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡಲಾಗುವುದು ಎಂದರು. ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಗೂ ನೂತನ ಸರ್ಕಾರಿ ಕಟ್ಟಡಗಳನ್ನು ಉದ್ಘಾಟನೆಯನ್ನು ಸಿಎಂ, ಡಿಸಿಎಂ ನೆರವೇರಿಸಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ.

ಕಾವೇರಿ ನೀರಾವರಿ ನಿಗಮದಿಂದ ಚನ್ನರಾಯಪಟ್ಟಣ ತಾಲ್ಲೂಕಿನ ಹದಿನೆಂಟು ಕೆರೆಗಳಿಗೆ ನೀರು ಹರಿಸುವ ಯೋಜನೆ, ಲೋಕೋಪಯೋಗಿ ಇಲಾಖೆಯಿಂದ ಅರಸೀಕೆರೆ ತಾಲ್ಲೂಕಿನಲ್ಲಿ ರಸ್ತೆಗಳ ನಿರ್ಮಾಣ, ಕಂದಾಯ ಇಲಾಖೆ ವತಿಯಿಂದ ಹಾಸನದಲ್ಲಿ ಪ್ರಜಾಸೌಧ ಕಟ್ಟಡ, ಸಕಲೇಶಪುರದಲ್ಲಿ ಮಿನಿ ವಿಧಾನಸೌಧದ ಎರಡು, ಮೂರು ಹಂತದ ಕಟ್ಟಡ ಉದ್ಘಾಟನೆ ಸೇರಿ ಒಟ್ಟು ವಿವಿಧ ಇಲಾಖೆಗಳಿಂದ 22 ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆಗೊಳ್ಳಲಿದೆ. 300 ಕೋಟಿಗೂ ಅಧಿಕ ವೆಚ್ಚದ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಕಾರ್ಯಕ್ರಮಕ್ಕೆ ಫಲಾನುಭವಿಗಳನ್ನು ಕರೆ ತರಲು ಜಿಲ್ಲಾಡಳಿತದಿಂದ 1154 ಸಾರಿಗೆ ಬಸ್, 218 ಕ್ಕೂ ಹೆಚ್ಚು ಖಾಸಗಿ ವಾಹನಗಳ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ತಿಳಿಸಿದ್ದಾರೆ.

### ಭಾರೀ ಪೊಲೀಸ್ ಭದ್ರತೆ

ಸಿಎಂ, ಡಿಸಿಎಂ ಸೇರಿದಂತೆ ಘಟಾನುಘಟಿ ಸಚಿವರು, ಶಾಸಕರ ದಂಡೇ ಕಾರ್ಯಕ್ರಮದಕ್ಕೆ ಆಗಮಿಸುತ್ತಿರುವುದರಿಂದ ನಗರದಲ್ಲಿ ಭಾರಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ಸಮಾರಂಭ ನಡೆಯುವ ಮೈದಾನಕ್ಕೆ ಹೊಂದಿಕೊಂಡಿರುವ ರಿಂಗ್ ರಸ್ತೆಯ ಒಂದು ಬದಿಯಲ್ಲಿ ಸಂಚಾರ ನಿರ್ಬಂಧ ವಿಧಿಸಲಾಗಿದೆ. ಹೆಲಿಕಾಪ್ಟರ್ ಮೂಲಕ ಬೂವನಹಳ್ಳಿ ಹೆಲಿಪ್ಯಾಡ್ ಗೆ ಆಗಮಿಸುವ ಸಿಎಂ ಹಾಗೂ ಡಿಸಿಎಂ ಅಲ್ಲಿಂದ ನೇರವಾಗಿ ರಸ್ತೆ ಮೂಲಕ ವೇದಿಕೆಗೆ ಆಗಮಿಸುವರು. ಸಮಾವೇಶದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ ನಡೆಸಲಿದ್ದಾರೆ.

ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮೈದಾನದಲ್ಲಿ ಕಾರ್ಯಕ್ರಮ ಆಯೋಜನೆಯಾಗಿದ್ದು, ಜನರನ್ನು ಕರೆತರುವ ಬಸ್ ಹಾಗೂ ವಾಹನಗಳ ಪಾರ್ಕಿಂಗ್, ಫಲಾನುಭವಿಗಳಿಗೆ ಆಹಾರ, ಕುಡಿಯುವ ನೀರಿನ ವ್ಯವಸ್ಥೆಗಳನ್ನು ಮಾಡಲಾಗಿದೆ.

ಎಲ್ಲವೂ ಸಮರ್ಪಕವಾಗಿ ನಡೆಯಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

### ಎಲ್ಲೆಲ್ಲೂ ರಾಜಾರಾಜಿಸುತ್ತಿರುವ ಫ್ಲೆಕ್ಸ್‌ಗಳು

ಸೇವೆ ಸಮರ್ಪಣೆ ಸಮಾವೇಶದ ಹಿನ್ನೆಲೆಯಲ್ಲಿ ನಗರಕ್ಕೆ ಆಗಮಿಸುತ್ತಿರುವ ನಾಯಕರ ಗಮನ ಸೆಳೆಯುವ ಸಲುವಾಗಿ ಕಾಂಗ್ರೆಸ್ ಮುಖಂಡರು,

ಕಾರ್ಯಕರ್ತರು ನಗರದ ತುಂಬೆಲ್ಲ ಸ್ವಾಗತ ಕೋರುವ ಫ್ಲೆಕ್ಸ್ ಗಳನ್ನು ಅಳವಡಿಸಿದ್ದಾರೆ. ಎಲ್ಲೆಲ್ಲಿ ನೋಡಿದರು ಸಿಎಂ, ಡಿಸಿಎಂ ಹಾಗೂ ಕೃಷ್ಣಬೈರೇಗೌಡರಿಗೆ ಸ್ವಾಗತ ಕೋರುವ ಫ್ಲೆಕ್ಸ್ ಗಳೇ ಕಣ್ಣಿಗೆ ರಾಚುತ್ತಿವೆ. ನಗರದ ಹೃದಯಭಾಗವಾದ ಹೇಮಾವತಿ ಪ್ರತಿಮೆಯನ್ನೇ ಮರೆ ಮಾಡುವಂತೆ ಫ್ಲೆಕ್ಸ್ ಅಳವಡಿಸಿರುವುದು ಪ್ರಜ್ಞಾವಂತರ ಅಸಮಾಧಾನಕ್ಕೆ ಕಾರಣವಾಗಿದೆ.

### ಶನಿವಾರ ಬಸ್ ದುರ್ಲಭ: ಪ್ರಯಾಣಿಕರೇ ಗಮನಿಸಿ

ಸೇವಾ ಸಮರ್ಪಣಾ ಸಮಾವೇಶಕ್ಕೆ ಭಾರಿ ಸಂಖ್ಯೆಯಲ್ಲಿ ಫಲಾನುಭವಿಗಳು ಹಾಗೂ ಸಾರ್ವಜನಿಕರನ್ನು ಸೇರಿಸಲು ಜಿಲ್ಲಾಡಳಿತ ಹಾಗೂ ಕಾಂಗ್ರೆಸ್ ಮುಖಂಡರು ಶ್ರಮಿಸುತ್ತಿದ್ದು, ಗ್ರಾಮೀಣ ಪ್ರದೇಶಗಳಿಂದ ಜನರನ್ನು ಕರೆತರಲು 1140 ಕೆ.ಎಸ್.ಆರ್.ಟಿ.ಸಿ.ಬಸ್ ಗಳು ಹಾಗೂ 250ಕ್ಕೂ ಹೆಚ್ಚು ಖಾಸಗಿ ಮ್ಯಾಕ್ಸಿ ಕ್ಯಾಬ್ ಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಇದರ ಪರಿಣಾಮವಾಗಿ ಶನಿವಾರ ಕೆ.ಎಸ್.ಆರ್.ಟಿ.ಸಿ. ಬಸ್ ಸಂಚಾರ ಮಾರ್ಗಗಳಲ್ಲಿ ಸೇವೆ ವ್ಯತ್ಯಯವಾಗುವ ಸಾಧ್ಯತೆಯಿದೆ. ಹೀಗಾಗಿ ಶಾಲಾ, ಕಾಲೇಜು ವಿದ್ಯಾರ್ಥಿಗಳು, ನೌಕರರು ಪರ್ಯಾಯ ವ್ಯವಸ್ಥೆಯ ಮೊರೆ ಹೋಗುವುದು ಅನಿವಾರ್ಯವಾಗಲಿದೆ.







# 1.48 ಕೋಟಿ ರೂ. ಕಾಮಗಾರಿಗೆ ಅಡಿಗಲ್ಲು

## ಹಾಸನ ಮಹಾನಗರ ಪಾಲಿಕೆಗೆ ಸರ್ಕಾರದಿಂದ ಹಣ ಬಂದಿಲ್ಲ: ಸ್ವರೂಪ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಹೇಮಾವತಿ ನಗರದಲ್ಲಿಂದು ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿಪೂಜೆ ನೆರವೇರಿಸಿದರು. ರಸ್ತೆ ಕಾಮಗಾರಿ, ಚರಂಡಿ ಸೇರಿದಂತೆ ವಿವಿಧ ಸಮಸ್ಯೆಗಳ ಬಗ್ಗೆ ಸಾರ್ವಜನಿಕರು ಶಾಸಕರ ಗಮನ ಸೆಳೆದ ಹಿನ್ನೆಲೆಯಲ್ಲಿ, ಬಡಾವಣೆಯ ಸಮಸ್ಯೆಯನ್ನು ಪರಿಗಣಿಸಿ ಸುಮಾರು 1.48 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಅದಕ್ಕಿಂದು ಶಾಸಕರು ಚಾಲನೆ ನೀಡಿದರು.

ಹೇಮಾವತಿ ನಗರದ ಗಾಯತ್ರಿ ಭವನದ ರಸ್ತೆ ಹಾಗೂ ಪುಟ್ಟೇಗೌಡರ ಮನೆಯ ರಸ್ತೆ ಹಾಗೂ ನೀರು ಚರಂಡಿ ವ್ಯವಸ್ಥೆಗೆ ಅಗತ್ಯವಿರುವ ಎಲ್ಲಾ ಕಾಮಗಾರಿಗಳಿಗೆ ಬಡಾವಣೆ ಜನರು



ಹಾಗೂ ಜೆಡಿಎಸ್ ಮುಖಂಡರ ಸಮ್ಮುಖದಲ್ಲಿ ಗುದ್ದಲಿ ಪೂಜೆ ನೆರವೇರಿಸಿದರು.

ಹೇಮಾವತಿ ನಗರದಲ್ಲಿ ದೀರ್ಘಕಾಲದಿಂದ ಬಾಕಿ ಉಳಿದಿರುವ ಮೂಲಸೌಕರ್ಯ ಕಾಮಗಾರಿಗಳಿಗೆ ಶುಕ್ರವಾರದಂದು ಸ್ಥಳೀಯ ಶಾಸಕ ಹೆಚ್.ಪಿ. ಸ್ವರೂಪ ಅವರು ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಬಡಾವಣೆಯ ಜನರು ಮಳೆ ನಂತರ ಉಂಟಾಗಿದ್ದ ರಸ್ತೆ, ಚರಂಡಿ, ಮೂಲಭೂತ ಸೌಕರ್ಯ, ಕುಡಿಯುವ ನೀರಿನ ತೊಂದರೆ ಬಗ್ಗೆ ಮನವಿ ಮಾಡಿದ್ದರು. ಆದ್ಯತೆ ಮೇರೆಗೆ ಆ ಕಾಮಗಾರಿಗಳಿಗೆ ಇಂದು ಭೂಮಿ ಪೂಜೆ ಮಾಡಲಾಗಿದೆ ಎಂದರು. ಗಾಯತ್ರಿ ಭವನದ ರಸ್ತೆ, ಪುಟ್ಟೇಗೌಡರ ಮನೆಯ ರಸ್ತೆ ಸೇರಿದಂತೆ ಬಡಾವಣೆಯ ಪ್ರಮುಖ ಮಾರ್ಗಗಳ ದುರಸ್ತಿ, ಪೈಪ್ ಲೈನ್ ನವೀಕರಣ, ನೀರು ಚರಂಡಿ ವ್ಯವಸ್ಥೆಗಳ ಸುಧಾರಣೆ, ಮಳೆ ನೀರು ಹರಿವಿನ ವ್ಯವಸ್ಥೆ ಹಾಗೂ ಕಾಲುವೆ ವಿಸ್ತರಣೆ ಸೇರಿದಂತೆ ಹಲವು ಕೆಲಸ ಈಗ ನಡೆಯಲಿವೆ ಎಂದರು.

ನಿವಾಸಿಗಳ ಸಹಕಾರ ಇದ್ದರೆ ಮುಂದೆ ಏನೇ ಸಮಸ್ಯೆ ಇದ್ದರೂ ಸರಿಪಡಿಸ ಲಾಗುವುದು. ಈ ಸರ್ಕಾರದಲ್ಲಿ ಅನುದಾನದ ಕೊರತೆ ಇರುವುದರಿಂದ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. 37 ಹಳ್ಳಿಗಳು ನಗರಪಾಲಿಕೆಗೆ ಸೇರ್ಪಡೆ ಆಗಿದ್ದು, ಸರಕಾರದಿಂದ ಯಾವುದೇ ಅನುದಾನ ಬಿಡುಗಡೆ ಆಗುತ್ತಿಲ್ಲ.

ಆದರೂ ಕೂಡ ನಗರ ಪಾಲಿಕೆ ಅನುದಾನದಲ್ಲೇ ನಾವು ಚಿಕ್ಕಪುಟ್ಟ ಕಾಮಗಾರಿ ಮಾಡುತ್ತಿದ್ದೇವೆ ಎಂದರು. ಗುಣಮಟ್ಟದ ಕೆಲಸ ಮಾಡಬೇಕು ಎಂದು ನಿವಾಸಿಗಳಿಗೆ ಹೇಳಲಾಗಿದೆ ಎಂದ ಅವರು, ಜನರ ಬೇಡಿಕೆಗಳಿಗೆ ಸ್ಪಂದಿಸುವುದು ನಮ್ಮ ಕರ್ತವ್ಯ. ಹೇಮಾವತಿ ನಗರದಲ್ಲಿ ಇನ್ನೂ ಬಾಕಿ ಇರುವ ಸಮಸ್ಯೆಗಳನ್ನೂ ಹಂತ ಹಂತವಾಗಿ ಬಗೆಹರಿಸುತ್ತೇವೆ. ಎಲ್ಲಾ ಕಾಮಗಾರಿಗಳೂ ಗುಣಮಟ್ಟ ಕಾಪಾಡಿಕೊಂಡೇ ಆಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಬಡಾವಣೆಯ ನಿವಾಸಿಗಳು, ಜೆಡಿಎಸ್ ಮುಖಂಡರು ಹಾಗೂ ಸ್ಥಳೀಯರು ನಿತ್ಯದ ಜೀವನಕ್ಕೆ ತೊಂದರೆ ಉಂಟು ಮಾಡುತ್ತಿದ್ದ ಸಮಸ್ಯೆಗಳಿಗೆ ಈಗ ಪರಿಹಾರ ಕಾಣುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಉಳಿದ ಸಮಸ್ಯೆ ಬಗ್ಗೆ ಶಾಸಕರಿಗೆ ಮನವರಿಕೆ ಮಾಡಿದರು. ಈ ವೇಳೆ ಜೆಡಿಎಸ್ ಮುಖಂಡ ಬಿದರಿಕೆರೆ ಜಯರಾಮ್, ನಿವಾಸಿಗಳಾದ ಚಿನ್ನೇನಹಳ್ಳಿಸ್ವಾಮಿ, ರಮೇಶ್ ಮೊದಲಾದವರಿದ್ದರು.

# ಡಿ.7ರಂದು 50 ಜೋಡಿ ಮಲೆನಾಡು ಗಿಡ್ಡ ಉಚಿತ ವಿತರಣೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇದೇ ಮೊದಲ ಬಾರಿಗೆ ನಮ್ಮ ದೇಶೀಯ ತಳಿಯಾದ ಮಲೆನಾಡು ಗಿಡ್ಡ ತಳಿಯ ಜೋರಿ ಹೋರಿಗಳ ಹಬ್ಬ ಹಮ್ಮಿಕೊಳ್ಳಲಾಗಿದೆ ಎಂದು ತಳಿಯ ಸಂರಕ್ಷಕ ಗೂಳಿ ಶರತ್‌ಗೌಡ ತಿಳಿಸಿದರು.

ಇಂದು ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಮಲೆನಾಡು ಗಿಡ್ಡ ತಳಿಯ ಸಂರಕ್ಷಣಾ ಉದ್ದೇಶದಿಂದ ಈ ಹಬ್ಬ ಆಚರಿಸಲಾಗುತ್ತಿದೆ. ಡಿ.7 ರಂದು ಭಾನುವಾರ ಚನ್ನರಾಯಪಟ್ಟಣ ತಾಲೂಕು ಸೋರೆಕಾಯಿಪುರದ ಮಲ್ಲಿಗಮ್ಮ ದೇವಸ್ಥಾನ (ಗೋಶಾಲೆ) ಆವರಣದಲ್ಲಿ ಹಬ್ಬ ನಡೆಯಲಿದೆ ಎಂದರು. ನಮ್ಮ ದೇಶೀಯ ತಳಿಯನ್ನು ಉಳಿಸಿ, ಅಭಿವೃದ್ಧಿ ಪಡಿಸಬೇಕು ಎಂಬ ಆಶಯದಿಂದ ಉಚಿತವಾಗಿ 50 ಜೋಡಿ ಗಿಡ್ಡಗಳನ್ನು ಉಚಿತವಾಗಿ ಹಂಚಿಕೆ ಮಾಡಲಾಗುತ್ತಿದೆ ಎಂದರು.

ವಿಶ್ವ ಒಕ್ಕಲಿಗರ ಮಠದ ಶ್ರೀ ಡಾ.ನಿಶ್ಚಲಾನಂದ ಸ್ವಾಮೀಜಿ, ಸ್ಥಳೀಯ ಶಾಸಕರಾದ ಸಿ.ಎನ್.ಬಾಲಕೃಷ್ಣ ಭಾಗಿಯಾಗುವರು. ರಾಧಾ ಸುರಭಿ ಗೋ ಮಂದಿರದ ಅಧ್ಯಕ್ಷರಾದ ಭಕ್ತಿ ಭೂಷಣ್ ದಾಸ್ ಉದ್ಘಾಟನೆ ನೆರವೇರಿಸುವರು.

ಹಳ್ಳಿಕಾರ್ ತಳಿಯಂತೆಯೇ ಮಲೆನಾಡು ಗಿಡ್ಡಗಳಲ್ಲೂ ಬೇಸಾಯ ಮಾಡಬಹುದು. ಅದರ ಉಪಯೋಗ ತಿಳಿಸುವುದೂ ನಮ್ಮ ಉದ್ದೇಶ ಎಂದರು.

ಸುದ್ದಿಗೋಷ್ಟಿಯಲ್ಲಿ ಶ್ರೀರಾಮ ಸೇನೆಯ ಪದಾಧಿಕಾರಿಗಳಾದ ಹೇಮಂತ್ ಜಾನಕೆರೆ, ದರ್ಶನ್, ಸಿದ್ಧಾರ್ಥ, ಸುಬ್ರಹ್ಮಣ್ಯ ಇದ್ದರು.

# ಕೆರೆಯಲ್ಲಿ ನಾಲ್ಕು ತಿಂಗಳ ಗರ್ಭಿಣಿಯ ಶವ ಪತ್ತೆ

## ಪತಿಯ ಮನೆಯವರ ಕಿರುಕುಳಕ್ಕೆ ಬಲಿಯಾದ ಆರೋಪ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ಹೊನ್ನವಳ್ಳಿ ಗ್ರಾಮದಲ್ಲಿ ನಾಲ್ಕು ತಿಂಗಳ ಗರ್ಭಿಣಿ ವಂದನಾ (24) ಎಂಬ ವಿವಾಹಿತೆಯ ಶವ ಕೆರೆಯಲ್ಲಿ ಪತ್ತೆಯಾಗಿದೆ. ಪತಿಯ ಮನೆಯವರು ಕಿರುಕು ನೀಡಿ ಆತ್ಮಹತ್ಯೆಗೆ ದೂಡಿದ್ದಾರೆ ಎಂದು ಮೃತಳ ಕುಟುಂಬಸ್ಥರು ಆರೋಪಿಸಿದ್ದಾರೆ.

**ಹೊನ್ನವಳ್ಳಿ ಕೆರೆಯಲ್ಲಿ ಪತ್ತೆಯಾದ ದೇಹ**

ಮಂಗಳವಾರ ಸಂಜೆ ವಂದನಾಳ ಶವ ಹೊನ್ನವಳ್ಳಿ ಗ್ರಾಮದ ಕೆರೆಯಲ್ಲಿ ತೇಲಿಬರುತ್ತಿರುವುದನ್ನು ಗ್ರಾಮಸ್ಥರು ಕಂಡು ಪೊಲೀಸರಿಗೆ ಮಾಹಿತಿ ನೀಡಿದ್ದರು. ನಂತರ ಪೊಲೀಸರು ದೇಹವನ್ನು ಕೆರೆಯಿಂದ ಹೊರತೆಗೆದು, ಜಿಲ್ಲಾ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿದ್ದಾರೆ.

**ಮೃತಳ ಕುಟುಂಬದ ಆರೋಪ**

ಒಂದೂವರೆ ವರ್ಷಗಳ ಹಿಂದೆ ಪ್ರೀತಿಸಿ ವಂದನಾ?ರೂಪಿತ್ ಮದುವೆಯಾಗಿದ್ದರು. ಮೆಡಿಕಲ್ ಶಾಪ್ ನಲ್ಲಿ ಕೆಲಸ ಮಾಡುತ್ತಿದ್ದ ವಂದನಾ, ಮದ್ಯ ವ್ಯಸನಿ ಪತಿ ರೂಪಿತ್ ಹಾಗೂ ಅವರ ಪೋಷಕರಾದ ಮಂಜುಳಾ ಮತ್ತು ರೇವಣ್ಣರಿಂದ ನಿರಂತರ ಹಣದ ಒತ್ತಡ ಹಾಗೂ ಕಿರುಕುಳ ಎದುರಿಸುತ್ತಿದ್ದರು ಎಂದು ವಂದನಾಳ ಪೋಷಕರು ಆರೋಪಿಸಿದ್ದಾರೆ.

**ಜಗಳದ ನಂತರ ಕಾಣೆಯಾಗಿದ್ದ ವಂದನಾ**

ಮಂಗಳವಾರ ಅತ್ತೆ ಮಂಜುಳಾ ಮತ್ತು ಸೊಸೆ ವಂದನಾ ನಡುವೆ ಜಗಳ ನಡೆದಿತ್ತು. ಅದರ ನಂತರದಿಂದ ವಂದನಾ ಕಾಣೆಯಾಗಿದ್ದು, ನಿನ್ನೆ ಸಾಯಂಕಾಲ ಕೆರೆಯಲ್ಲಿ ಮೃತದೇಹ ಪತ್ತೆಯಾಗಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

**ಪ್ರೀತಿ, ಪ್ರೇಮ ವಿವಾಹಗಳಿಗೆ ಬಲಿಯಾದ ಎರಡು ಜೀವಗಳ ನೋವುಂಡ ಕುಟುಂಬ**

ಕೆಲ ವರ್ಷಗಳ ಹಿಂದೆ ವಂದನಾಳ ತಂಗಿ ಮೇಘನಾ (19) ಯುವಕನೊಬ್ಬನನ್ನು ಪ್ರೀತಿಸಿದ್ದರು. ಸಂಬಂಧದಲ್ಲಿ ತಲೆದೋರಿದ ಸಮಸ್ಯೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದರು. ಆ ನಂತರ ವಂದನಾ ಪ್ರೀತಿಸಿ ಮದುವೆಯಾಗಿದ್ದರು. ಮಗಳ ವೈವಾಹಿಕ ಜೀವನದಿಂದ ಅಸಮಾಧಾನಗೊಂಡಿದ್ದ ತಂದೆ ಮಂಜುನಾಥ್ ಮತ್ತು ಸಹೋದರ ದೀಪಕ್ ಅವರು ವಂದನಾಳನ್ನು ಭೇಟಿ ಮಾಡಿರಲಿಲ್ಲ. ತಾಯಿಯೊಂದಿಗೆ ಮಾತ್ರ ಸಂಪರ್ಕದಲ್ಲಿದ್ದ ವಂದನಾ ಘಟನೆಗೆ ಮುಂಚಿನ ದಿನಗಳಲ್ಲೂ ಮನೆಯಲ್ಲಿ ತೀವ್ರ ಸಂಘರ್ಷ ಎದುರಿಸುತ್ತಿದ್ದರು ಎಂದು ಕುಟುಂಬ ಮೂಲಗಳು ಹೇಳಿವೆ.

**ಪೊಲೀಸ್ ತನಿಖೆ ಆರಂಭ**

ಘಟನೆ ಕುರಿತು ಅರಕಲಗೂಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತಿ ಹಾಗೂ ಅತ್ತೆ?ಮಾಮನ ವಿಚಾರಣೆ ಪ್ರಕ್ರಿಯೆ ಮುಂದುವರೆದಿದೆ. ಮರಣದ ನಿಖರ ಕಾರಣ ಮರಣೋತ್ತರ ವರದಿ ಬಂದ ನಂತರ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಮನೆಗಾಗಿ ಆಮರಣಾಂತ ಸತ್ಯಾಗ್ರಹ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೀರನಹಳ್ಳಿ ಕೆರೆ ಬಳಿ ಇರುವ ಬಡವರ ನಿವೇಶನ ವಿಚಾರದಲ್ಲಿ 18 ವರ್ಷಗಳಿಂದ ಕಣ್ಣೀರಿಡುವಂತಾಗಿದ್ದು, ರಾಜಕೀಯ ದ್ವೇಷಕ್ಕೆ 75 ಮನೆಗಳ ಕುಟುಂಬಗಳು ಬೀದಿ ಪಾಲಾಗಿದೆ. ನ್ಯಾಯಕ್ಕಾಗಿ ಆಮರಾಣಾಂತ ಉಪವಾಸ ಮಾಡಲು ತೀರ್ಮಾನಿಸಿದ್ದೇವೆ ಎಂದು ನೊಂದ ನಿವಾಸಿಗಳಾದ ಕಮಲ ಮತ್ತು ಗಂಗಾಧರ್ ತಿಳಿಸಿದರು.




ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, 2007, ಮೇ 11 ರಂದು ನಮ್ಮ ಬದುಕಿನ ಕರಾಳ ದಿನ ಎಂದರೇ ತಪ್ಪಾಗಲಾರದು. ಬೀರನಹಳ್ಳಿ ಕೆರೆ ಅಂಗಳದ 75 ಬಡ ಕುಟುಂಬಗಳು ಕಣ್ಣೀರಿನಿಂದ ನೆನಪಿಸಿಕೊಳ್ಳುತ್ತಿವೆ. ಅಂದು ಬೆಳಗ್ಗೆ ಪೊಲೀಸ್ ಭದ್ರತೆ ನಡುವೆ ಜೆಸಿಬಿ ಮೂಲಕ ನಮ್ಮ ಮನೆಗಳ ಸುಧಾರಣೆ ಹೆಸರಿನಲ್ಲಿ ಜಿಲ್ಲಾಡಳಿತ ನೆಲಸಮಗೊಳಿಸಿತು ಎಂದು ಅಳಲು ತೋಡಿಕೊಂಡರು. ಇದು ನಿವಾಸಿಗಳ ಜೀವನದಲ್ಲಿ ಮಾಸದ ಗಾಯವಾಗಿದೆ. ಅಧಿಕಾರಿಗಳ ಕಠೋರ ಕ್ರಮದಿಂದ 75 ಬಡ ಕುಟುಂಬಗಳ ಮನೆಗಳನ್ನು ನೆಲಸಮಗೊಳಿಸಲಾಗಿದೆ.

ಅಂದಿನ ಕಣ್ಣೀರಿನ ಕೂಗು, ಆಕ್ರಂದನಕ್ಕೆ ಯಾರೂ ಕರುಣೆ ತೋರಲಿಲ್ಲ. ನಂತರ ಅಂದಿನ ಶಾಸಕ ಹಾಗೂ ಆಶ್ರಯ ಸಮಿತಿ ಅಧ್ಯಕ್ಷ ಹೆಚ್.ಎಸ್. ಪ್ರಕಾಶ್ ಅವರು 66 ಫಲಾನುಭವಿಗಳನ್ನು ಆಯ್ಕೆ ಮಾಡಿ ಕೃಷ್ಣನಗರದಲ್ಲಿ ನಿವೇಶನ ನೀಡಲು ಹಕ್ಕುಪತ್ರ ವಿತರಿಸಿದ್ದರು. ಹಕ್ಕುಪತ್ರ ಕೊಟ್ಟ ನಂತರ ಹಿಂತೆಗೆತವಾಗಿದೆ. ಹಕ್ಕುಪತ್ರ ನೀಡಿದರೂ ಕೃಷ್ಣನಗರದಲ್ಲಿ ಆಶ್ರಯ ಯೋಜನೆ ಅಡಿ ನಿವೇಶನ ಕೊಡಲು ಸಾಧ್ಯವಿಲ್ಲ. ಎಂದು ನಗರಾಭಿವೃದ್ಧಿ ಪ್ರಾಧಿಕಾರ ತಿರಸ್ಕರಿಸಿದೆ ಎಂದು ದೂರಿದರು.

ಬೀರನಹಳ್ಳಿ ಕೆರೆಗೆ ಮನೆಗಳನ್ನು ಕಳೆದುಕೊಂಡ ಕುಟುಂಬಗಳು 18 ವರ್ಷಗಳಿಂದ ಬೀದಿ ಬದಿಯಲ್ಲಿ, ಬಾಡಿಗೆ ಮನೆಗಳಲ್ಲಿ, ಸಂಕಷ್ಟದಲ್ಲಿ ಬದುಕುತ್ತಿವೆ. ನಿವೇಶನಕ್ಕಾಗಿ ರಾಜಕಾರಣಿಗಳ, ಅಧಿಕಾರಿಗಳ, ಕಚೇರಿಗಳ ಬಾಗಿಲು ತಟ್ಟಿದರೂ ನ್ಯಾಯ ಸಿಗಲಿಲ್ಲ. ನಮ್ಮ ಮನೆ ನೆಲಸಮ ಮಾಡಿದ ಜಾಗ ಹಾಗೆಯೇ ಇದ್ದು ಯಾವುದೇ ಅಭಿವೃದ್ಧಿ ಆಗಿಲ್ಲ. ಹಾಗಿದ್ರೆ ಯಾವ ಕಾರಣಕ್ಕೆ ತೆರವು ಮಾಡಿದರು ಎಂದು ಪ್ರಶ್ನಿಸಿದರು. ಹಲವು ಬಾರಿ ಮನವಿ ಕೊಟ್ಟರೂ ಯಾವ ಪ್ರಯೋಜನವೂ ಸಿಕ್ಕಿಲ್ಲ ಎಂದು ತಮ್ಮ ಅಳಲು ತೋಡಿಕೊಂಡರು. ಜಿಲ್ಲಾಧಿಕಾರಿ, ಮುಖ್ಯಮಂತ್ರಿ ಕಾರ್ಯಾಲಯ, ವಸತಿ ಸಚಿವಾಲಯ, ಜಿಲ್ಲಾ ಉಸ್ತುವಾರಿ ಮಂತ್ರಿಗಳ ಜನಸ್ಪಂದನ ಸಭೆ, ಎಲ್ಲೆಡೆ ಮನವಿ ಸಲ್ಲಿಸಿದರೂ ಸ್ಪಂದನೆ ಇಲ್ಲ. ಇದೀಗ ಅಂತಿಮ ಹೋರಾಟ ಆಮರಾಣಾಂತ ಉಪವಾಸ ಮಾಡಲು ನಿರ್ಧಾರ ಮಾಡಲಾಗಿದೆ. ಎಲ್ಲ 75 ಕುಟುಂಬಗಳು ಜಿಲ್ಲಾಧಿಕಾರಿ ಕಚೇರಿ ಎದುರು ಆಮರಾಣಾಂತ ಉಪವಾಸ ಸತ್ಯಾಗ್ರಹ ಮಾಡಲು ನಿರ್ಧರಿಸಿದ್ದೇವೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ನಿವೇಶನ ಕಳೆದುಕೊಂಡ ಗೌರಮ್ಮ, ಜಯಲಕ್ಷ್ಮಿ, ಮೀನಾಕ್ಷಿ, ಹೇಮಾ, ಪುಷ್ಪಾವತಿ ಇದ್ದರು.

## ಡಿ.7 ರಂದು ನಗರಲ್ಲಿ ವಾಕಥಾನ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಿರೀಕ್ಷೆ ಫೌಂಡೇಶನ್ ವತಿಯಿಂದ ಇದೇ ತಿಂಗಳ 7 ರಂದು ನಗರದಲ್ಲಿ ಹಾಸನ ವಾಕಥಾನ್ ನಡಿಗೆ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಫೌಂಡೇಶನ್ ಅಧ್ಯಕ್ಷ ಸುಭಾಷ್ ಮತ್ತು ಸ್ವಯಂ ಸೇವಕ ಮಂಜುನಾಥ್ ತಿಳಿಸಿದರು.

ಇಂದು ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ನಮ್ಮ ಸಂಸ್ಥೆ 14 ವರ್ಷದಿಂದ ಸಮಾಜ ಮುಖಿಯಾಗಿ ಕೆಲಸ ಮಾಡುತ್ತಿದೆ. ಉತ್ತಮ ರಸ್ತೆ, ಸಂಸ್ಕೃತಿ ನಿರ್ಮಾಣ, ರಸ್ತೆ ಸುರಕ್ಷತೆ, ಟ್ರಾಫಿಕ್ ನಿಯಮ ಪಾಲನೆ, ಆರೋಗ್ಯ ಜಾಗೃತಿ, ಸ್ವಚ್ಛ ಹಸಿರು ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಇದೀಗ ಮನಸ್ಸಿಗೆ ಚೈತನ್ಯ ನೀಡುವ, ತೂಕ ಇಳಿಸಲು ಪೂರಕವಾದ, ರೋಗ ನಿರೋಧಕ ಶಕ್ತಿ ಹೆಚ್ಚಿಸುವ, ದಿನವಿಡೀ ಚುರುಕುತನ, ಸ್ನಾಯುಬಲಕ್ಕೆ ಪೂರಕವಾದ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 7 ಗಂಟೆಗೆ




ನಡಿಗೆ ಹಾಸನಾಂಬ ಒಳಾಂಗಣ ಕ್ರೀಡಾಂಗಣ ಬಳಿಯಿಂದ ಆರಂಭವಾಗಲಿದೆ. ಸುಮಾರು 3 ಕಿಮೀ ಸಂಚರಿಸಲಿದೆ. ಟಾಪ್ 50 ವಾಕರಿಗೆ ಪದಕ ನೀಡಲಾಗುವುದು ಎಂದರು. ಅಂದಿನ ವಾಕಥಾನ್‌ಗೆ ಜಿಲ್ಲಾ ಅಮೆಚೂರ್ ಅಥ್ಲೆಟಿಕ್ಸ್ ಸಂಸ್ಥೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಬೆಂಬಲ ಇದೆ. ವಯಸ್ಸಿನ ಮಿತಿ ಇಲ್ಲದೆ ಎಲ್ಲರೂ ಬನ್ನಿ ನಡೆಯೋಣ, ಆರೋಗ್ಯವಂತರಾಗೋಣ ಎಂದು ಮನವಿ ಮಾಡಿದರು.

# ಸುಗಮ ಸಂಚಾರಕ್ಕೆ ವೈಜ್ಞಾನಿಕ ಮೇಲು ಸೇತುವೆ

## ಬಿರುಕು ಬಿಟ್ಟ ದೊಡ್ಡಕೆರೆ ಏರಿ-ಹದಗೆಟ್ಟ ರಸ್ತೆಯಲ್ಲಿ ವಾಹನ ಸವಾರರ ಪರದಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ಕೊಣನೂರು- ಕೆರೆಕೋಡಿ ನಡುವೆ ವಾಹನಗಳ ಸುಮಗ ಸಂಚಾರಕ್ಕಾಗಿ ವೈಜ್ಞಾನಿಕವಾಗಿ ಮೇಲು ಸೇತುವೆ ಕಟ್ಟಿ ಪರ್ಯಾಯವಾಗಿ ರಸ್ತೆ ನಿರ್ಮಾಣ ಮಾಡಬೇಕು ಎನ್ನುವ ಆಗ್ರಹ ಜನರಿಂದ ಕೇಳಿಬರುತ್ತಿದೆ.

ಕೊಣನೂರು ಕೆರೆ ಏರಿ ಕುಸಿದು ಶಿಥಿಲಾವಸ್ಥೆಗೆ ತಲುಪಿದೆ. ಸದ್ಯಕ್ಕೆ ಅಪಾಯಕಾರಿ ಸ್ಥಿತಿಯಲ್ಲಿರುವ ಏರಿ ಬಿರುಕು ಬಿಟ್ಟು ಡಾಂಬರು ಕಿತ್ತು ಹಾಳಾಗಿ ಎರಡು ವರ್ಷ ಗತಿಸಿದರೂ ದುರಸ್ತಿ ಕಾಣದ ರಸ್ತೆಯಲ್ಲಿ ಪ್ರಯಾಣಿಕರು ಜೀವ ಭಯದಲ್ಲೇ ಓಡಾಡುವಂತಾಗಿದೆ. ಆಗಿನ ಕಾಲಕ್ಕೆ ತಕ್ಕಂತೆ ಕಿರಿದಾಗಿ ನಿರ್ಮಿಸಿದ್ದ ಕೆರೆ ಏರಿ ರಸ್ತೆಯಲ್ಲಿ ಈಗ ವಾಹನಗಳ ಸಂಚಾರ ಅಧಿಕವಾಗಿದೆ.

ಕಳೆದ ಎರಡು ವರ್ಷಗಳ ಹಿಂದೆ ಮಳೆ ಅಬ್ಬರಕ್ಕೆ ಸಿಲುಕಿ ಕೆರೆ ಏರಿ ಕುಸಿದು ಡಾಂಬರು ಬಿರುಕು ಬಿಟ್ಟು ರಸ್ತೆ ಕೊಚ್ಚಿ ಹೋಗಿತ್ತು. ನಂತರ ರಸ್ತೆ ಬಂದ್ ಮಾಡಿ ಕೆಲವು ಕಡೆ ತಾತ್ಕಾಲಿಕವಾಗಿ ಬಿರುಕು ಮುಚ್ಚಿ ತೇಪೆ ಹಾಲಾಗಿತ್ತು. ಆಗ ಸ್ಥಳಕ್ಕೆ ಭೇಟಿ ನೀಡಿದ್ದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಶೀಘ್ರ ಕೆರೆ ಏರಿ ದುರಸ್ತಿ ಪಡಿಸುವುದಾಗಿ ನೀಡಿದ್ದ ಭರವಸೆ



ಇಂದಿಗೂ ಈಡೇರಿಲ್ಲ.

ಕೆರೆ ಏರಿ ತೋಟದ ಕಡೆಗೆ ವಾಲಿದಂತೆ ಕುಸಿದಿದ್ದು ಡಾಂಬರು ಕಾಣದೆ ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ಪ್ರಯಾಣಿಕರಿಗೆ ಸುರಕ್ಷತೆ ಎಂಬುದು ಮರೀಚಿಕೆಯಾಗಿದೆ. ಹದಗೆಡ್ಡ ರಸ್ತೆಯಲ್ಲಿಯೇ ದಿನನಿತ್ಯ ಕೆಎಸ್ ಆರ್‌ಟಿಸಿ ಬಸ್ ಸೇರಿದಂತೆ ಸಾವಿರಾರು ವಾಹನಗಳಲ್ಲಿ ಪ್ರಯಾಣಿಕರು ಜೀವ ಕೈಯಲ್ಲಿ ಹಿಡಿದು ಓಡಾಡುತ್ತಿದ್ದಾರೆ. ಕೆರೆ ಏರಿ ಕುಸಿದಿರುವುದು ಗೊತ್ತಿದ್ದರೂ ಕ್ಷೇತ್ರದ ಜನಪ್ರತಿನಿಧಿ ಮತ್ತು ಅಧಿಕಾರಿಗಳು ಕಣ್ಣಿದ್ದೂ ಕುರುಡರಂತೆ ವರ್ತಿಸುತ್ತಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೊಡ್ಡಕೆರೆ ಏರಿ ಕೆಲ ವರ್ಷಗಳ ಹಿಂದೆಯೇ ಅವಸಾನದ ಹಾದಿ ಹಿಡಿದು ಶಿಥಿಲಾವಸ್ಥೆಗೆ ತಲುಪಿತ್ತು. ಮಳೆಗಾಲದಲ್ಲಿ ದೊಡ್ಡ ಪ್ರಮಾಣದಲ್ಲಿ ಬಾಯ್ತೆರೆದು ಕುಸಿಯಲಾರಂಭಿಸಿದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ದಿವ್ಯ ನಿರ್ಲಕ್ಷ್ಯ ವಹಿಸಿದ ಪರಿಣಾಮವನ್ನು ಈಗ ಪ್ರಯಾಣಿಕರು ದಿನನಿತ್ಯ ಅನುಭವಿಸುವಂತಾಗಿದೆ.

ದೊಡ್ಡಕೆರೆ ಏರಿಯ ಮಾರ್ಗವಾಗಿ ಕೊಣನೂರಿನಿಂದ ಕೆರೆಕೋಡಿ, ಹಂಡ್ರಂಗಿ, ಬೆಮ್ಮತ್ತಿ, ಕೊಡಗು ಜಿಲ್ಲೆ ಹಾಗೂ ಮಲ್ಲಿಪಟ್ಟಣ ಸೇರಿದಂತೆ ಹತ್ತಾರು ಗ್ರಾಮಗಳ ಸಂಪರ್ಕವನ್ನು ಹೊಂದಿರುವ ರಾಜ್ಯ ಹೆದ್ದಾರಿ ರಸ್ತೆಯನ್ನು ಕೆರೆ ಏರಿಯ ಮೇಲೆ ನಿರ್ಮಿಸಲಾಗಿದೆ.

ಆದರೆ ಏರಿಯ ಮೇಲಿನ ರಸ್ತೆ ಗುಣಮಟ್ಟದ ಕಡೆಗೆ ಹೆಚ್ಚಿನ ಆದ್ಯತೆ ನೀಡಿಲ್ಲ. ರಸ್ತೆ ವಿಸ್ತೀರ್ಣ ಮಾಡುವಾಗ ಕಾಮಗಾರಿಯನ್ನು ವೈಜ್ಞಾನಿಕವಾಗಿ ಕೈಗೊಳ್ಳದ ಪರಿಣಾಮ ಕೆರೆಏರಿಯ ಮಧ್ಯಭಾಗದಲ್ಲಿನ ಸುಮಾರು 200ಮೀಟರ್ ಡಾಂಬರ್ ರಸ್ತೆ ಮೂರು ಅಡಿಗೂ ಹೆಚ್ಚು ಕುಸಿತಕ್ಕೆ ಒಳಗಾಗಿದೆ. ಕೆರೆ ಏರಿಯ ಮೇಲಿನ ರಸ್ತೆ ಅಂದಾಜು ಒಂದು ಕಿಮೀ ದೂರವನ್ನು ಒಳಗೊಂಡಿದ್ದು ತಿರುವಿನಿಂದ ಕೂಡಿ ತೀರ ಕಿಷ್ಕಿಂದೆಯಾಗಿದೆ.

ಕೆರೆ ಏರಿ ಒಂದು ಭಾಗದಲ್ಲಿ ಭಾರಿ ಪ್ರಮಾಣದ ನೀರು ಮತ್ತೊಂದು ಕಡೆ ಅಡಿಕೆ ತೋಟ, ಭತ್ತದ ಬೆಳೆ ಕೈಗೊಳ್ಳುವ ಅಚ್ಚುಕಟ್ಟು ಪ್ರದೇಶವಿದೆ. ಏರಿ ಒಡೆದರೆ ಆಗುವ ಅನಾಹುತ ಅಷ್ಟಿಷ್ಟಲ್ಲ. ಕೆಳ ಭಾಗದ ಅಡಿಕೆ ತೋಟ ಹಾಗೂ ಸಾಗುವಳಿ ಅಚ್ಚುಕಟ್ಟಿನ ಅಪಾರ ಪ್ರಮಾಣದ ಭೂಮಿ ಕೊಚ್ಚಿ ಹೋಗಿ ಕೆರೆಯ ಅಸ್ತಿತ್ವಕ್ಕೆ ದೊಡ್ಡ ಗಂಡಾತರ ಒದಗಲಿದೆ.

ಕಳೆದ ಸಲ ಲೋಕೋಪಯೋಗಿ ಹಾಗೂ ಹಾರಂಗಿ ಇಲಾಖೆಯ ಇಂಜಿನಿಯರ್‌ಗಳು ಕೋಡಿಯಿಂದ ಹೆಚ್ಚಿನ ನೀರನ್ನು ಹೊರಬಿಟ್ಟು ಕೆರೆಯ ನೀರಿನ ಪ್ರಮಾಣವನ್ನು ಕಡಿಮೆ ಮಾಡಿಕೊಂಡು ರಸ್ತೆ ಕುಸಿದಿರುವಷ್ಟು ಕಡೆ ಕೆರೆಗೆ ತಾತ್ಕಾಲಿಕವಾಗಿ ಬಂಡನ್ನು ನಿರ್ಮಿಸಲು ಕ್ರಮ ವಹಿಸಿದ್ದರು. ಆದರೆ ಕೆರೆ ಏರಿ ಅಭಿವೃದ್ಧಿ ಪಡಿಸಿ ಶಾಶ್ವತ ಪರಿಹಾರ ಒದಗಿಸುವ ಕೆಲಸ ಇಂದಿಗೂ ಆಗಿಲ್ಲ.

ಕೊಣನೂರು, ಕೆರೆಕೋಡಿ, ಹಂಡ್ರಂಗಿ. ಮಲ್ಲಿಪಟ್ಟಣ ಮತ್ತು ಕೊಡಗು ಜಿಲ್ಲೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ಹೆದ್ದಾರಿ ಇದಾಗಿದೆ. ಈ ಭಾಗದ ಹತ್ತಾರು ಹಳ್ಳಿಗಳ ಗ್ರಾಮಸ್ಥರು ಈ ಮಾರ್ಗವನ್ನೆ ಅವಲಂಬಿಸಿದ್ದಾರೆ. ತಾಲೂಕು ಕೇಂದ್ರ ಅರಕಲಗೂಡು ಹಾಗೂ ಹಾಸನ, ಮೈಸೂರು ಕಡೆಗೆ ಬರುವ ಪ್ರಯಾಣಿಕರು ಇದೇ ಮಾರ್ಗವಾಗಿ ಓಡಾಡುತ್ತಿದ್ದಾರೆ. ಹಾರಂಗಿ ಮತ್ತು ಹೇಮಾವತಿ ನಾಲೆಗಳ ನೀರು ಒಟ್ಟಿಗೆ ಸೇರುವ ಸಂಗಮವಾದ ಈ ದೊಡ್ಡಕೆರೆಯಲ್ಲಿ ವರ್ಷವಿಡೀ ನೀರು ತುಂಬಿರುತ್ತದೆ. ಇಲ್ಲಿ ಪ್ರಮುಖ ಮಾರ್ಗವಾಗಿರುವ ದೊಡ್ಡಕೆರೆ ಏರಿಯನ್ನು ವೈಜ್ಞಾನಿಕವಾಗಿ ವಿಸ್ತರಿಸಿ ಅಭಿವೃದ್ಧಿ ಪಡಿಸುವ ಗೋಜಿಗೆ ಹೋಗಿಲ್ಲ. ಇನ್ನೊಂದೆಡೆ ದುರ್ಗಮ ಹಾದಿಯಂತಿದ್ದ ಕೆರೆ ಏರಿ ಕುಸಿದಿದ್ದರೂ ಶಾಶ್ವತ ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಕೆರೆ ಏರಿ ಪೂರ್ತಿ ಕುಸಿದರೆ ಅಪಾರ ಹಾನಿ ಉಂಟಾಗಲಿದೆ. ಒಂದು ಕಡೆ ಕೆರೆಯ ಒಡಲು ಮತ್ತೊಂದು ಕಡೆ ಪ್ರಪಾತದ ಹಳ್ಳವಿದ್ದು ತಿರುವಿನಿಂದ ಕೂಡಿರುವ ಹಾಳಾದ ರಸ್ತೆಯಲ್ಲಿ ವಾಹನ ಸವಾರರು ಜೀವದ ಹಂಗು ತೊರೆದು ಓಡಾಡುತ್ತಿದ್ದಾರೆ. ಆದರೆ ರಸ್ತೆ ದುಸ್ಥಿತಿ ಮಾತ್ರ ಸಂಬಂಧಪಟ್ಟವರ ಕಣ್ಣಿಗೆ ರಾಚುತ್ತಿಲ್ಲ. ಕೆರೆ ಏರಿ ರಸ್ತೆ ಅಭಿವೃದ್ಧಿ ಪಡಿಸಬೇಕು. ಕೆರೆ ಏರಿ ಪಕ್ಕದಲ್ಲಿ ಪರ್ಯಾವಾಗಿ ವೈಜ್ಞಾನಿಕವಾಗಿ ಮೇಲು ಸೇತುವೆ ನಿರ್ಮಿಸಿದರೆ ಕಿರಿದಾದ ಕೆರೆ ಏರಿ ಮೇಲಿನ ವಾಹನಗಳ ದಟ್ಟಣೆ ನಿಯಂತ್ರಿಸಬಹುದು. ಈ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

> ಕೊಣನೂರು ದೊಡ್ಡಕೆರೆ ಏರಿ ಕುಸಿದು ಹಾಳಾದ ಸ್ಥಳಕ್ಕೆ ಇತ್ತೀಚೆಗೆ ಸಂಸದ ಶ್ರೇಯಸ್ ಪಟೇಲ್ ಅವರು ಭೇಟಿ ನೀಡಿ ಪರಿಶೀಲಿಸಿದ್ದು ಅಭಿವೃದ್ಧಿ ಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ತಿರುವಿನಿಂದ ಕೂಡಿದ್ದ ಕಿಷ್ಕಿಂದೆಯಂತಿರುವ ಕೆರೆ ಏರಿ ರಸ್ತೆಯನ್ನು ವೈಜ್ಞಾನಿಕವಾಗಿ ವಿಸ್ತರಿಸಿ ಅಭಿವೃದ್ಧಿ ಪಡಿಸಬೇಕು. ಮುಖ್ಯವಾಗಿ ವಾಹನಗಳ ಓಡಾಟ ದಿನನಿತ್ಯ ಹೆಚ್ಚುತ್ತಿದ್ದು ವೈಜ್ಞಾನಿಕವಾಗಿ ಕೊಣನೂರು- ಕೆರೆಕೋಡಿ ನಡುವೆ ಮೇಲು ಸೇತುವೆ ನಿರ್ಮಿಸಿದರೆ ಅನುಕೂಲವಾಗಲಿದೆ. ಇದರಿಂದ ಕೆರೆ ಏರಿಯ ಸುರಕ್ಷತೆಯನ್ನೂ ಕಾಪಾಡಿಕೊಳ್ಳಬಹುದು.
>
> 
>
> **- ಸರಗೂರು ದೊಡ್ಡೇಗೌಡ**
> **ಹಾರಂಗಿ ಮಹಾ ಮಂಡಲ ಮಾಜಿ ಉಪಾಧ್ಯಕ್ಷ**

> ಕೊಣನೂರು ದೊಡ್ಡಕೆರೆ ಏರಿ ಕುಸಿದಿರುವ ಸ್ಥಳಕ್ಕೆ ತಜ್ಞರ ತಂಡ ಭೇಟಿ ನೀಡಿ ಪರಿಶೀಲಿಸಿದ್ದು ಏರಿ ಮಣ್ಣು ಕಳಪೆಯಾಗಿ ಕುಸಿದಿದೆ. ಹೀಗಾಗಿ ಹೊಸದಾಗಿ ಏರಿ ನಿರ್ಮಿಸಲಾಗುವುದು. ತೂಬು, ಕೋಡಿ ಅಭಿವೃದ್ಧಿ ಪಡಿಸಲು 4.70 ಕೋಟಿ ರೂ ವೆಚ್ಚದಲ್ಲಿ ಅಚಿದಾಜು ಪಟ್ಟಿ ಸಿದ್ದಪಡಿಸಿ ಟೆಂಡರ್ ಅನುಮೋದನೆಗೆ ಕಳುಹಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.
>
> 
>
> **- ಮಂಜುನಾಥಮೂರ್ತಿ**
> **ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಹಾರಂಗಿ ಪುನರ್ವಸತಿ ಉಪ ವಿಭಾಗ, ಕೊಣನೂರು.**

> ಕೊಣನೂರು ದೊಡ್ಡಕೆರೆ ಏರಿಯನ್ನು ವೈಜ್ಞಾನಿಕವಾಗಿ ಪರಿಶೀಲಿಸಲಾಗಿದ್ದು ತೋಟದ ಕಡೆಗೆ ಕುಸಿದು ವಾಲಿದೆ. ರಸ್ತೆಗೆ ಡಾಂಬರು ಹಾಕಲು 1 ಕೋಟಿ ರೂ ಅನುದಾನವಿದೆ. ನೀರಾವರಿ ಇಲಾಖೆ ಏರಿ ನಿರ್ಮಿಸಿದ ನಂತರ ರಸ್ತೆ ಅಭಿವೃದ್ಧಿ ಪಡಿಸಲಾಗುವುದು.
>
> 
>
> **- ಬಿಂದು**
> **ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಇಂಜಿನಿಯರ್, ಅರಕಲಗೂಡು.**

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248